'.....'

'ಇನ್ನು ನೀವು ಬರೋದಿಲ್ಲ, ಮಗೂನೂ ಕಳಿಸೋಲ್ಲ ಅನ್ನೋದು ಖಾತರಿಯಾಗತೊಡಗಿದಾಗ ಆದ ನೋವು ಹೇಗೆ ಹೇಳಲಿ? ಅಲ್ಲಿ ಬಿಡಲಾಗದೆ ನಿಮ್ಮಲ್ಲಿಗೆ ಬರಲಾಗದೆ ಒದ್ದಾಡಿದ್ದೇ ಆಯಿತು. ಶಾಲಾ ಮಕ್ಕಳ ಜೊತೆಯಲ್ಲಿ ಎಲ್ಲವನ್ನೂ ಮರೆಯತೊಡಗಿದೆ. ಓದು ಮುಂದುವರೆಸಿ ಬಿ.ಎ., ಬಿ.ಎಡ್. ಮುಗಿಸಿದೆ. ಹೈಸ್ಕೂಲ್‌ನಲ್ಲಿ ಇಷ್ಟು ವರ್ಷ ಗ್ರಾಮೀಣ ಭಾಗದಲ್ಲಿದ್ದೆ, ಈಗ ಇಲ್ಲಿಗೆ ವರ್ಗವಾಗಿದೆ' ನಾನು ಮೌನವಾಗಿ ಕೇಳುತ್ತಿದ್ದೆ.

'ಅಪ್ಪ ತೀರ್ಕೊಂಡು ಹತ್ತು ವರ್ಷವಾಯ್ತು. ಅಮ್ಮನೂ ಮನೆ ನೋಡ್ಕೋಕ್ಕೆ ನನ್ನ ಜೊತೆಯಲ್ಲೇ ಹೊರಟರು. ಕೊನೆಗೆ, 'ನೀನೊಬ್ಬಳು ನೋಡಿಕೊಂಡು ಬಾ. ಹೇಗೂ ನಕುಲ ಇದ್ದಾನಲ್ಲ, ನಾ ಒಂದು ಗಳಿಗೆ ಇಲ್ಲೇ ಇರ್ತೀನಿ' ಅಂತ ಶರ್ಮರ ಮನೇಲೇ ಉಳಿದರು.' ಎಂದವಳೇ ಥಟ್ಟನೆ ಏನನ್ನೋ ನೆನಪಿಸಿಕೊಂಡವಳಂತೆ, 'ತೇಜು ಹೇಗಿದ್ದಾಳೆ? ಎಲ್ಲಿದ್ದಾಳೆ? ನನ್ನ ಬಗ್ಗೆ ಎಲ್ಲ ಗೊತ್ತ? ನನ್ನನ್ನು ದ್ವೇಷಿಸ್ತಾಳಾ?' ಪ್ರಶ್ನೆಗಳ ಮಳೆ ಸುರಿದಳು. 'ತೇಜು ಈಗ ತುಂಬು ಗರ್ಭಿಣಿ, ಮುಂದಿನ ವಾರ ಇಲ್ಲಿಗೆ ಬರ್ತಾಳೆ... ಅದೆಲ್ಲ ನಿಧಾನವಾಗಿ ಹೇಳ್ತಿನಿ' ಎನ್ನುವಷ್ಟರಲ್ಲಿ ಶಂಕರಮ್ಮನ ಫೋನ್, 'ಬಾಣಂತನ ಮಾಡೋಕ್ಕೆ ಸಿಕ್ಕಿದ್ದಾರೆ, ನಾಳೆ ಕರ್ಕೊಂಡು ಬರ್ತೀನಿ'.

'ಬೇಡ ಶಂಕರಮ್ಮ, ವ್ಯವಸ್ಥೆ ಆಗಿದೆ, ಹಾಗೇ ನಾಳೆ ನೀವೂ ರಜ ತೊಗೊಳ್ಳಿ ನಾನು ಮನೇಲಿರೋಲ್ಲ' ಎಂದು ಕರೆಕಡಿದೆ.

'ಅಡುಗೆ ಶಂಕರಕ್ಕ ಫೋನ್ ಮಾಡಿದ್ದು, ತೇಜೂ ಬಾಣಂತನಕ್ಕೆ ಸಹಾಯಕ್ಕೆ ಯಾರಾದ್ರೂ ಇದ್ರೆ ಹೇಳಿ' ಅಂತ ಕೇಳಿದ್ದೆ... ನೀನೂ, ಅಮ್ಮ ಇರೋವಾಗ ಬೇರೆಯವರು ಬೇಡ ಅಂತ ನಿನ್ನನ್ನು ಒಂದು ಮಾತು ಕೇಳದೆ ನಾನೇ ತೀರ್ಮಾನ ತೊಗೊಂಡೆ. ಪರವಾಗಿಲ್ವಾ?' ತಡವರಿಸಿದೆ.

'ತಾಯಿಯಾಗಿ, ಅಜ್ಜಿಯಾಗಿ ಸಂಭ್ರಮಿಸೋ ಕಾಲ ಒದಗಿ ಬಂದಾಗ ಅದಕ್ಕಿಂತ ಅದೃಷ್ಟವೇ?' ಮತ್ತೆ ಬಿಕ್ಕಿದಳು. ಸುಭದ್ರೆಯನ್ನು ಎದೆಗಾನಿಸಿಕೊಂಡೆ.

'ಕೆಲಸಕ್ಕೆ ರಾಜೀನಾಮೆ ಕೊಡ್ತೀನಿ, ಇಷ್ಟುದಿನ ಸೇವೆ ಸಲ್ಲಿಸಿದ ತೃಪ್ತಿ ಇದೆ, ಒಬ್ಬ ಒಳ್ಳೆಯ ಗೃಹಿಣಿಯಾಗಿರಬೇಕು ಅಂತ ಮನ ಹಂಬಲಿಸುತ್ತೆ.'

ಅವಳ ಅಷ್ಟು ದಿನದ ನೋವೆಲ್ಲಾ ಕಣ್ಣೀರಾಗಿ ಎಡಬಿಡದೇ ಸುರಿವಾಗ ನನ್ನ ಉಡುಗೆ ಅದನ್ನೆಲ್ಲ ಹಿಡಿದಿಟ್ಟುಕೊಂಡಿತ್ತು. 'ಯಾವುದೇ ಒತ್ತಾಯವಿಲ್ಲ, ನಿನ್ನಿಷ್ಟ' ಎನ್ನುತ್ತಾ ಅವಳ ಮುಂದಲೆ ನೇವರಿಸಿದೆ. ಸ್ವಲ್ಪ ಸಮಯದ ಅನಂತರ ಅವಳ ಬಿಕ್ಕು ಕಡಿಮೆಯಾಗಿ, ಸಮಾಧಾನದ ನಿಟ್ಟುಸಿರೆಳೆದಳು.

ತೇಜುವಿಗೆ ಈ ಅಚ್ಚರಿಯನ್ನು, ಆಘಾತವಾಗದಂತೆ ನಾಜೂಕಾಗಿ ತಿಳಿಸಿ ಹೇಳುವುದರ ಕುರಿತ ಆಲೋಚನೆ ಒಂದೆಡೆಯಾದರೆ, ಇನ್ನೊಂದೆಡೆ, ದೀರ್ಘಕಾಲದ ಅನಂತರ ಅಮ್ಮ ಮಗಳ ಮಿಲನದ ಕ್ಷಣಗಳನ್ನು ನೆನೆದು ಮನದೊಳಗೆ ಸಂಭ್ರಮದ ಲಹರಿಯೂ ಭೋರ್ಗರೆಯುತ್ತಿತ್ತು.

**ಕೆ.ವಿ. ರಾಜಲಕ್ಷ್ಮಿ**

ದೂರಸಂಪರ್ಕ ಇಲಾಖೆಯಲ್ಲಿ ಲೆಕ್ಕಾಧಿಕಾರಿಯಾಗಿ ನಿವೃತ್ತರು. ಪ್ರಸ್ತುತ ವಕೀಲ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದು, ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 200ಕ್ಕೂ ಹೆಚ್ಚು ಕತೆ, ಹಾಸ್ಯ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಕಟಿತ ಕೃತಿಗಳು: 'ಅಂಕುರ' (ಕಥಾಸಂಕಲನ), 'ವಿನೋದ' (ಹಾಸ್ಯ ಬರಹಗಳ ಸಂಕಲನ).